# ನಾದಮಯ.. ನಾದಜ್ಯೋತಿ

ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ನಾದಜ್ಯೋತಿ ಸಂಗೀತ ಸಂಸ್ಥೆ ಇದೀಗ ಸುವರ್ಣ ಸಂಭ್ರಮದಲ್ಲಿದೆ. ಪ್ರತಿವರ್ಷ ಹಲವಾರು ಸಂಗೀತ ಕಛೇರಿಗಳನ್ನು ಆಯೋಜಿಸುತ್ತಾ ಬಂದ ಸಂಸ್ಥೆ ಸಂಗೀತ ಸಾಧಕರನ್ನೂ ಪುರಸ್ಕರಿಸುತ್ತದೆ.

★ ಉಮಾ ವೇಣೂರು



ಎಚ್.ಪಿ. ಪ್ರಭಾಕರ ಪಾಠಕ್



ಜೆ.ಎಲ್. ಕೃಷ್ಣಮೂರ್ತಿ (ಸ್ಥಾಪಕಾಧ್ಯಕ್ಷರು)

ಇದು ಸುಮಾರು ಐವತ್ತು ವರ್ಷಗಳಷ್ಟು ಹಿಂದಿನ ಮಾತು. ಬೆಂಗಳೂರಿನ ಮಲ್ಲೇಶ್ವರಂನ ಸಣ್ಣ ಮನೆಯೊಳಗಿನಿಂದ ಪಿಟೀಲು ನಾದ ಅಲೆ ಅಲೆಯಾಗಿ ಕೇಳಿಬರುತ್ತಿತ್ತು. ಸುತ್ತಲಿನ ಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದ ಈ ನಾದ ಮಾಧುರ್ಯದಿಂದ ಅಲ್ಲಿ ಸಂಗೀತಮಯ ವಾತಾವರಣ ಸೃಷ್ಟಿಯಾಗುತ್ತಿತ್ತು. ದಿನೇ ದಿನೇ ಕೇಳುಗರು ಮನೆಯ ಸುತ್ತ ಸೇರತೊಡಗಿದರು. ಅದು ಪಿಟೀಲು ವಾದಕ ಎಚ್. ಪಿ. ಪ್ರಭಾಕರ ಪಾಠಕ್ ಅವರು ನುಡಿಸುತ್ತಿದ್ದ ಪಿಟೀಲಿನ ನಾದ ಪಿಟೀಲು ತಂತಿಯ ಸುನಾದ ಸಂಗೀತ ರಸಿಕರನ್ನು ಸೆಳೆದಂತೆ ತಮ್ಮ ಪ್ರೀತಿ ವಾತ್ಸಲ್ಯದ ಮಾತುಗಳಿಂದ ಜನರನ್ನೂ ಸೆಳೆಯುತ್ತಿದ್ದವರು ಪಾಠಕ್. ಒಂದು ಸಣ್ಣ ಭಜನಾ ಮಂಡಳಿ ಕಟ್ಟಿದರೆ ಇನ್ನೂ ಹೆಚ್ಚು ಸಂಗೀತಾಸಕ್ತರಿಗೆ ಅನುಕೂಲವಾಗ ಬಹುದು ಎಂದು ತಮ್ಮ ಮನೆಯಲ್ಲೇ 'ನಾದಜ್ಯೋತಿ ಶ್ರೀ ತ್ಯಾಗರಾಜ ಭಜನಾ ಮಂಡಳಿ'ಯನ್ನು ಸ್ಥಾಪಿಸಿದರು. ಹೀಗೆ 1965ರಲ್ಲಿ ಆರಂಭವಾದ ಈ ಸಂಗೀತ ಸಂಸ್ಥೆ ಆರಂಭವಾಯಿತು.

ಮುಂದೆ ನಿರಂತರವಾಗಿ ತ್ಯಾಗರಾಜ, ಪುರಂದರದಾಸ, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಾ ಶಾಸ್ತ್ರಿಗಳು ಮುಂತಾದ ವಾಗ್ಗೇಯಕಾರರ ಆರಾಧನಾ ಮಹೋತ್ಸವ ಗಳನ್ನು ಸಂಸ್ಥೆ ಆಚರಿಸುತ್ತಾ ಬಂತು. ಇದಕ್ಕೆ ಜೆ.ಎಲ್. ಕೃಷ್ಣಮೂರ್ತಿ, ನಾಮಕಲ್‌ರಾವ್, ದಿಂಡಿಗಲ್ ಎಸ್.ಪಿ. ನಟರಾಜನ್ ಹಾಗೂ ಶ್ರೀನಿವಾಸ ಅಡಿಗ ಮುಂತಾದವರು ಸಹಕಾರವನ್ನೂ ನೀಡಿದರು.

ವರ್ಷದಿಂದ ವರ್ಷಕ್ಕೆ ಕೇಳುಗರ ಸಂಖ್ಯೆ ಹೆಚ್ಚಿತು. ಮುಂದೆ ಕಾರ್ಯಕ್ರಮಗಳು ಮಲ್ಲೇಶ್ವರದ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಸಭಾಂಗಣದಲ್ಲಿ ನಡೆಯಲಾರಂಭಿಸಿತು. ನಾಡಿನ ಹಲವಾರು ಸಂಗೀತ ವಿದ್ವಾಂಸರು, ಪಕ್ಕವಾದ್ಯ ಪ್ರವೀಣರು, ಪ್ರತಿವರ್ಷ ಆರಾಧನಾ ಮಹೋತ್ಸವದಲ್ಲಿ ಹಾಡಿ, ನುಡಿಸಿ ಮನತಣಿಸಲಾರಂಭಿಸಿದರು. ಶ್ರುತಿ, ರಾಗ, ತಾಳ, ಲಯಗಳಿಂದ ಸಂಸ್ಥೆ ಹೆಚ್ಚು ಹೆಚ್ಚು ಜನಪ್ರಿಯವಾಗತೊಡಗಿತು.



ಡಾ. ನಾಗರಾಜಶಾಸ್ತ್ರಿ



ಕೆ. ಸತ್ಯನಾರಾಯಣರಾವ್

ಪ್ರಭಾಕರ ಪಾಠಕ್ ಅವರ ಶಿಷ್ಯರಲ್ಲಿ ಪ್ರಮುಖರಾದ ಲಲಿತಾಂಬಾ, ಮಂಜು ನಾಥ, ಜೆ.ಎಲ್. ಕೃಷ್ಣಮೂರ್ತಿ, ಶಕುಂತಲಾ, ಶಶಿಧರ್, ಕೆ. ಸತ್ಯನಾರಾಯಣ ರಾವ್ ಮುಂತಾದವರ ಪರಿಶ್ರಮದಿಂದ ಸಂಸ್ಥೆ ಬೃಹದಾಕಾರವಾಗಿ ಬೆಳೆದು ಪ್ರತಿ ತಿಂಗಳೂ ಸಂಗೀತ ಕಾರ್ಯಕ್ರಮ ರಸಿಕರ ಮನಸೂರೆಗೊಳ್ಳುವಂತಾಯಿತು.

ಕಿರಿದಾಗಿದ್ದ ನಾದಜ್ಯೋತಿ ಬೃಹದಾಕಾರಾವಾಗಿ ಬೆಳೆದು 25 ವರ್ಷ ಪೂರೈಸಿತು. ಬಳಿಕ 'ಶ್ರೀ ನಾದಜ್ಯೋತಿ ತ್ಯಾಗರಾಜ ಭಜನಾ ಸಭಾ' ಎಂಬ ಶೀರ್ಷಿಕೆಯಡಿ ರಿಜಿಸ್ಟರ್ಡ್ ಸಂಸ್ಥೆಯಾಗಿ ಮಾರ್ಪಟ್ಟಿತು. ಉತ್ಸಾಹದಿಂದ ಸಂಗೀತ ಸಂಸ್ಥೆ ಆರಂಭಿಸಿ ಹೆಮ್ಮರವಾಗಿ ಬೆಳೆಯಲಾರಂಭಿಸಿದ ಸಮಯದಲ್ಲೇ ಪಾಠಕರು 1986ರಲ್ಲಿ ಅಸ್ತಂಗತರಾದರು. ಆದರೂ ಸಂಗೀತ ಪ್ರೇಮಿಗಳು ಸಂಸ್ಥೆಯನ್ನು, ಸಂಗೀತ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುತ್ತಾ ಬಂದರು. ಏಳು ದಿನಗಳ ಸಂಗೀತ ಉತ್ಸವ, ಯುವಕಲಾವಿದರಿಗಾಗಿಯೇ ಯುವೋತ್ಸವ ಮುಂತಾದ ಜನಮನ್ನಣೆಯ ಸಂಗೀತ ಕಾರ್ಯಕ್ರಮ ನಡೆಸಲಾರಂಭಿಸಿದರು.

1971ರಿಂದ 1983ರವರೆಗೂ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಎಡಭಾಗದಲ್ಲಿ ಆರಾಧನಾ ಮಹೋತ್ಸವ 12 ದಿನಗಳವರೆಗೆ ವಿಸ್ತರಿಸಲ್ಪಟ್ಟಿತು. ಹಿರಿಯ ಸಂಗೀತ ಕಲಾವಿದರ ಜೀವಮಾನದ ಸಾಧನೆಯನ್ನು ಪರಿಗಣಿಸಿ ಅವರನ್ನು ಸನ್ಮಾನಿಸುವ ಸಂಪ್ರದಾಯ ಹುಟ್ಟುಹಾಕಿ ಪ್ರತಿವರ್ಷವೂ ಸನ್ಮಾನಗಳೂ ನಡೆದವು. 1965ರಿಂದ ಹತ್ತು ವರ್ಷ ಕಾಲ ಎಸ್.ಪಿ. ನಟರಾಜನ್, 75ರಿಂದ 79ರವರೆಗೆ ಸೇಲಂ ಶ್ರೀನಿವಾಸಮೂರ್ತಿ ಅವರು, 79ರಿಂದ ಜೆ.ಎಲ್. ಕೃಷ್ಣಮೂರ್ತಿ ಅವರು ಅಧ್ಯಕ್ಷರಾಗಿ ಸಂಗೀತ ಸೇವೆಗೆ ಅನುವು ಮಾಡಿಕೊಟ್ಟರು. 1986ರಲ್ಲಿ ವೀಣೆ ವಿದ್ವಾಂಸರಾಗಿದ್ದ ದೊರೆಸ್ವಾಮಿ ಅಯ್ಯಂಗಾರ್, ವಿದುಷಿ ರಾಜಮ್ಮ ಕೇಶವ ಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಅದಕ್ಕೂ ಮುನ್ನ ವಿದ್ವಾಂಸರಾಗಿದ್ದ ದಿಂಡಿಗಲ್ ಎಸ್.ಪಿ. ನಟರಾಜನ್, ಎಂ.ಎಲ್. ವೀರಭದ್ರಯ್ಯ, ಆರ್.ಆರ್. ಕೇಶವಮೂರ್ತಿ, ಮೃದಂಗ ಪುಟ್ಟಾಚಾರ್, ಪಲ್ಲವಿ ಚಂದ್ರಪ್ಪ, ವೀಣೆ ವಿದ್ವಾಂಸ ರಾದ ಗಾನಕಲಾಭೂಷಣ ವೀಣೆ ರಾಜಾರಾವ್ ಅವರನ್ನು ಸಂಸ್ಥೆ ಸನ್ಮಾನಿಸಿತ್ತು.

ಬೇಬಿ ಗಾಯತ್ರಿ, ಸಿ.ಎಂ. ಮಧುರಾನಾಥ್, ತಿರುಚಿ ಶಂಕರನ್, ಎಂ.ಎಸ್. ಗೋಪಾಲಕೃಷ್ಣನ್ ಮುಂತಾದವರ ಸಹಾಯಾರ್ಥ ಕಛೇರಿಗಳೂ ನಡೆದವು.

## ಕಲಾಜ್ಯೋತಿ ಬಿರುದು

ಪುಟ್ಟ ಸಂಸ್ಥೆ ಹೆಮ್ಮರವಾಗಿ ಬೆಳೆಯಿತು. ಸಂಗೀತಾರಾಧಕರು, ಆಸಕ್ತರು ಸಂಸ್ಥೆಯ ಬೆನ್ನೆಲುಬಾಗಿ ನಿಂತರು. ನಿರಂತರ ಕಛೇರಿ ಗಳು ನಡೆದು ನಾದಜ್ಯೋತಿ ಪ್ರಖರವಾಗಿ ಬೆಳಗ ಲಾರಂಭಿಸಿತು. ಸಂಗೀತದಲ್ಲಿ ಮಹತ್ತರ ಸಾಧನೆ ಮಾಡಿದವರಿಗೆ 1977ರಿಂದ 'ಕಲಾಜ್ಯೋತಿ' ಬಿರುದು ನೀಡಲಾರಂಭಿಸಿತು. ವಿದ್ವಾನ್ ಚೆನ್ನಕೇಶವಯ್ಯ, ಬಿ.ಎಸ್. ರಾಜಯ್ಯಂಗಾರ್ ಅವರಿಗೆ ಕಲಾಜ್ಯೋತಿ ಬಿರುದು ಸಂದಿತು. ಅದಾಗಿ ಪ್ರತೀ ವರ್ಷ ಸಾಧಕರಿಗೆ ಈ ಬಿರುದು ನೀಡಲಾಗುತ್ತಿದೆ.

ಪ್ರತೀ ತಿಂಗಳು ಒಂದು ಕಾರ್ಯಕ್ರಮ, ಅನನ್ಯ ಕಲಾ ಸಂಸ್ಥೆಯೊಂದಿಗೆ ಸೇರಿ ಅನನ್ಯ ಯುವ ಪುರಸ್ಕಾರ ನೀಡಲಾರಂಭಿಸಿತು. ಸಂಗೀತ ಕಾರ್ಯಾಗಾರ, ಶಿಬಿರ, ಪ್ರಾತ್ಯಕ್ಷಿಕೆ ನಡೆಸಿ ಸಂಗೀತದ ಜ್ಞಾನ ವಿಸ್ತರಿಸುವಲ್ಲಿ ಶ್ರಮಿಸುತ್ತಿದೆ. ಎಂಟು ದಿನ, ಹನ್ನೊಂದು ದಿನ ನಡೆಸುತ್ತಿದ್ದ ಸಂಗೀತೋತ್ಸವವನ್ನು ನಿರಂತರ 40 ದಿನ ವಿವಿಧ ಕಛೇರಿಗಳನ್ನು ಆಯೋಜಿಸುವುದರ ಮೂಲಕ ವಿಸ್ತರಿಸಲಾಯಿತು. ಜತೆಗೆ 'ನಾದ ಜ್ಯೋತಿ' ಎಂಬ ಮತ್ತೊಂದು ಪುರಸ್ಕಾರ ನೀಡಲು ನಾಂದಿ ಹಾಡಿತು.

ದಾಸರ, ತ್ಯಾಗರಾಜರ ಆರಾಧನೆ ಒಂದು ದಿನದಿಂದ 9 ದಿನಗಳವರೆಗೆ ವಿಸ್ತರಿಸಿತು. ಹರಿದಾಸ ಸಂಭ್ರಮ ಕಾರ್ಯಕ್ರಮದಡಿ ಸಂಗೀತ ಗೋಷ್ಠಿ, ಪ್ರವಚನಗಳನ್ನು ಐದು ದಿನಗಳು ನಡೆಸಲಾಗುತ್ತಿದೆ. ಕಾರ್ತಿಕ ಮಾಸದಲ್ಲಿ ಕಾರ್ತಿಕ ಸಂಗೀತ ಶುಭ ಸಂಧ್ಯಾ ಎಂಬ ವಿಶೇಷ ಸಂಗೀತ ಕಛೇರಿಗಳು, ಅಣ್ಣಮಾಚಾರ್ಯರ ಜಯಂತಿ ಇವೇ ಮುಂತಾದ ವಿಶಿಷ್ಟ ಕಾರ್ಯಕ್ರಮಗಳನ್ನು ಪ್ರತಿ ವರ್ಷವೂ ತಪ್ಪದೆ ನಡೆಸುತ್ತಾ ಬಂದ ಅಪೂರ್ವ ಸಂಗೀತ ಸಂಸ್ಥೆ ಇದು ಎಂಬ ಹೆಗ್ಗಳಿಕೆ ಇದರದು.

ಇಷ್ಟು ಸುದೀರ್ಘವಾದ ಇತಿಹಾಸ ಹೊಂದಿದ ನಾದಜ್ಯೋತಿ ಸಂಗೀತ ಸಂಸ್ಥೆ ಇದೀಗ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದೆ. ಐವತ್ತು ದಿನಗಳ ಕಾಲ ವಿವಿಧ ಸಂಗೀತ ಗಾಯನ, ವಾದನ ಕಛೇರಿಗಳನ್ನು ಆಯೋಜಿಸಿ ಸಂಗೀತ ಪ್ರಿಯರಿಗೆ ಹಬ್ಬದ ವಾತಾವರಣ ಸೃಷ್ಟಿಸುತ್ತಿದೆ. ಅಂದ ಹಾಗೆ ಜನವರಿ 18ರಿಂದ ಮಾರ್ಚ್ 8 ರವರೆಗೆ 50 ದಿನಗಳವರೆಗೆ ಇಲ್ಲಿ ಸಂಗೀತ ಕಛೇರಿಗಳ ಭರಪೂರ ಸುಗ್ಗಿ. ■